ಮುಖ್ಯ ಸಂಶೋಧನಾಧಿಕಾರಿಯವರ ಕಚೇರಿ,
ಭೂಗುಣ ತಂತ್ರ ವಿಜ್ಞಾನ ಮತ್ತು
ತಳಪಾಯ ಇಂಜಿನಿಯರಿಂಗ್ ವಿಭಾಗ,
ಕರ್ನಾಟಕ ಇಂಜಿನಿಯರಿಂಗ್
ಸಂಶೋಧನಾ ಕೇಂದ್ರ,
ಕೃಷ್ಣರಾಜಸಾಗರ-571607

ಜಲಸಂಪನ್ಮೂಲ ಇಲಾಖೆ

Office of the
Chief Research Officer,
Soil Mechanics & Foundation
Engineering Division,
K.E.R.S. K.R.Sagara-571607.
ದೂರವಾಣಿ : 08236-297012
ಇ-ಮೇಲ್:crosmfedn.krs@ka.gov.in

---

ಸಂಖ್ಯೆ: ಮುಸಂಅ/ಭೂತಂವಿ/ಕೆಇಆರ್‌ಎಸ್/ಅಧ್ಯಯನ-ತರಬೇತಿ/2021-22/ 88-98 ದಿನಾಂಕ: 03-05-2021

ಇವರಿಗೆ,
ಪ್ರಾಂಶುಪಾಲರು,
ಎನ್.ಐ.ಇ. ಕಾಲೇಜು,
ಮೈಸೂರು.

ಮಾನ್ಯರೆ,

ವಿಷಯ: ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗ, ಕೆ.ಇ.ಆರ್.ಎಸ್., ಮತ್ತು National Institute of Engineering (NIE), Mysore ನಡುವೆ Health Assessment of earthen embankment of dam (Stability Analysis of slope of embankment) ಅಧ್ಯಯನದ ಸಂಬಂಧ MOU (Memorandum of Understanding) ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಕೆ.ಇ.ಆರ್.ಎಸ್., ಕೃಷ್ಣರಾಜಸಾಗರ ರವರ ಕಛೇರಿ ಪತ್ರ ಸಂಖ್ಯೆ:296-97:2021-22, ದಿನಾಂಕ:27.04.2021.

*** **** ***

ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜಸಾಗರ ಇಲ್ಲಿನ ನಮ್ಮ ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗದ ವತಿಯಿಂದ ಪ್ರಸ್ತುತ 2021-22 ನೇ ಸಾಲಿನಲ್ಲಿ Health Assessment of Earthern Embankment of Dam (Stability Analysis of Slope of Embankment) ಈ ವಿಷಯದ ಬಗ್ಗೆ ಅಧ್ಯಯನ ತೆಗೆದುಕೊಳ್ಳಲು ಉದ್ದೇಶಿಸಲಾಗಿರುತ್ತದೆ. ಇದೊಂದು ವಿಶೇಷ ತಾಂತ್ರಿಕ ಅಧ್ಯಯನವಾಗಿದ್ದು ಈ ಅಧ್ಯಯನದಿಂದ ರಾಜ್ಯದ ಬೃಹತ್ / ಮಧ್ಯಮ / ಸಣ್ಣ ಜಲಾಶಯಗಳ ಹಾಗೂ ಕೆರೆಗಳ Earthern Embankment ಗಳ Slope Stability Assessment ಮಾಡಬಹುದಾಗಿರುತ್ತದೆ. ಈ ಅಧ್ಯಯನಗಳನ್ನು ಕೈಗೊಳ್ಳಲು ಕೆಲವು ತಾಂತ್ರಿಕ ಅಂಶಗಳು, ಸಾಫ್ಟ್‌ವೇರ್‌ಗಳು ಹಾಗೂ ಈ ವಿಷಯದಲ್ಲಿ ಹೆಚ್ಚಿನ ಪರಿಣಿತಿ ಹೊಂದಿರುವವರ ಮಾರ್ಗದರ್ಶನ ಹಾಗೂ ತರಬೇತಿ ಅತ್ಯವಶ್ಯಕವಾಗಿರುತ್ತದೆ.

ಸದರಿ ಅಧ್ಯಯನದ ಸಂಬಂಧ ನಮ್ಮ ವಿಭಾಗದ ಶಾಖೆಗಳ ಸಂಶೋಧನಾಧಿಕಾರಿ / ಸಹಾಯಕ ಸಂಶೋಧನಾಧಿಕಾರಿಗಳೊಡನೆ ನಿಮ್ಮ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು (HOD) ಮತ್ತು ಪ್ರಾಧ್ಯಾಪಕರುಗಳನ್ನು ಭೇಟಿ ಮಾಡಿ ಚರ್ಚಿಸಲಾಗಿ ಅವರು ತಮ್ಮ ಕಾಲೇಜು ಹಾಗೂ ನಮ್ಮ ಕೆ.ಇ.ಆರ್.ಎಸ್. ಸಂಸ್ಥೆಯ ಸಹಯೋಗದೊಂದಿಗೆ ಸದರಿ ವಿಷಯದ ಬಗ್ಗೆ ಒಂದು case study ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸಿ ತಾಂತ್ರಿಕ ಉಪನ್ಯಾಸ ಮತ್ತು ತರಬೇತಿಯನ್ನು ನೀಡಲು ಸಹಮತಿಸಿ, ತಮ್ಮ ಕಾಲೇಜಿನ ಸಹ ಪ್ರಾಧ್ಯಾಪಕರಾದ ಶ್ರೀ ಆನಂದ್ ಎಂ ಹುಲಗಬಲಿ ರವರಿಂದ ಜನವರಿ 2021ನೇ ಮಾಹೆಯಲ್ಲಿ ತರಬೇತಿಯನ್ನು ಸಹ ಆಯೋಜಿಸಿ ನಿರ್ವಹಿಸಲಾಗಿರುತ್ತದೆ. ಸದರಿ ವಿಷಯವಾಗಿ ಅಧ್ಯಯನ ಕೈಗೊಳ್ಳಲು ಅನುಕೂಲವಾಗುವಂತೆ ಭೂಗುಣ ತಂತ್ರ ವಿಜ್ಞಾನ ಮತ್ತು ತಳಪಾಯ ಇಂಜಿನಿಯರಿಂಗ್ ವಿಭಾಗ ಹಾಗೂ Department of Civil Engineering, NIE, MYSORE ನಡುವೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ನಿರ್ದೇಶಕರು, ಕೆ.ಇ.ಆರ್.ಎಸ್., ಕೃಷ್ಣರಾಜಸಾಗರ ರವರ ಮೂಲಕ ಉಲ್ಲೇಖಿತ ಪತ್ರದಲ್ಲಿ ಸರ್ಕಾರದ ಮಟ್ಟಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸುತ್ತಾ ಸದರಿ ವಿಷಯದ ಸಂಬಂಧ ತಮ್ಮ ಸಹಕಾರವನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ

ಅಡಕ: ಉಲ್ಲೇಖಿತ ಪತ್ರದ ಪ್ರತಿ

ಸಹಿ/-

ಮುಖ್ಯ ಸಂಶೋಧನಾಧಿಕಾರಿ,
ಭೂಗುಣ ತಂತ್ರ ವಿಜ್ಞಾನ ಮತ್ತು
ತಳಪಾಯ ಇಂಜಿನಿಯರಿಂಗ್ ವಿಭಾಗ,
ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ,
ಕೃಷ್ಣರಾಜಸಾಗರ.

E:\NEW TECHNICAL SECTION FILES\NIE MIT.docx